159ನೇಲ

(34)

**ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಶಶೀಲ್ ಜಿ ನಮೋಶಿರವರಿಂದ ನಿಯಮ 72ರ ಅಡಿಯಲ್ಲಿ ನೀಡಿರುವ ಗಮನಸೆಳೆಯುವ ಸೂಚನೆಗೆ ಉತ್ತರಿಸುವ ಬಗ್ಗೆ.**

**ಸೂಚನೆ:**

ರಾಯಚೂರು ಜಿಲ್ಲೆ ಸಿರವಾರ ತಾಲ್ಲೂಕಿನ ಅತ್ತನೂರು ಗ್ರಾಮಕ್ಕೆ ಸ್ವಾತಂತ್ರ ನಂತರದಿಂದ ಇಲ್ಲಿಯವರೆಗೆ ಸರ್ಕಾರವು ಕುಡಿಯುವ ನೀರಿನ ಸೌಲಭ್ಯ ಒದಗಿಸಿಲ್ಲ. ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿ (ಎಂ ವಿ ಎಸ್) 17 ಎಕರೆ ವಿಸ್ತೀರ್ಣದ ಕೆರೆ ಕಾಮಗಾರಿ ಕೂಡ ಅರ್ಧಕ್ಕೆ ನಿಂತು ಹೋಗಿದ್ದು, ಈ ಕೆರೆಯನ್ನು ಪೂರ್ಣಗೊಳಿಸಿ ಮತ್ತು ಮುಂದೆ ಕೈಗೆತ್ತಿಕೊಳ್ಳುವ ಯೋಜನೆಯಡಿ ವಿಲೀನಗೊಳಿಸಿ ಈ ಜಲಮೂಲವನ್ನು ಸದ್ಬಳಕೆ ಮಾಡಿಕೊಂಡು ಅತ್ತನೂರು ಗ್ರಾಮಕ್ಕೆ ಯಾವ ನಿಗಧಿತ ದಿನಾಂಕದೊಳಗೆ ಶಾಶ್ವತ ಶುದ್ಧ ಕುಡಿಯುವ ನೀರಿನ ಸೌಲಭ್ಯ ಒದಗಿಸಲಾಗುವುದು. ಹಾಗೂ ತುರ್ತಾಗಿ ಗ್ರಾಮದ ಜನತೆಗೆ ಮನೆ ಮನೆಗೆ ಶುದ್ಧ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಅಗತ್ಯ ಕ್ರಮಕೈಗೊಳ್ಳುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಹೇಳಿಕೆ:**

ರಾಯಚೂರು ಜಿಲ್ಲೆಯ ಸಿರವಾರ ತಾಲ್ಲೂಕಿನ ಅತ್ತನೂರು ಗ್ರಾಮಕ್ಕೆ ಕುಡಿಯುವ ನೀರನ್ನು ಒದಗಿಸಲು, ಅತ್ತನೂರು ಹಾಗೂ ಇತರೆ 7 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯು 2008-09ರಲ್ಲಿ ಮಂಜೂರಾಗಿದ್ದು, ಸದರಿ ಯೋಜನೆಯೊಂದಿಗೆ ಕಲ್ಲೂರು ಹಾಗೂ ಇತರೆ 1 ಗ್ರಾಮದ ಬಹುಗ್ರಾಮ ಕುಡಿಯುವ ನೀರಿನ ಇನ್ನೊಂದು ಯೋಜನೆಯನ್ನು ಕ್ರೂಢೀಕರಿಸಿ ಒಟ್ಟು ಅಂದಾಜು ಮೊತ್ತ ರೂ.760.00ಲಕ್ಷಗಳ ಟೆಂಡರನ್ನು ಶ್ರೀ ಅಮರಖೇಡ್ ಎಸ್ ಎಮ್ ಗುತ್ತಿಗೆದಾರರಿಗೆ ದಿನಾಂಕ:02.02.2009ರಂದು ವಹಿಸಲಾಗಿತ್ತು.

ಈ ಯೋಜನೆಗಳ ಅಂದಾಜು ಪಟ್ಟಿಯಲ್ಲಿ 2 Impounding Reservoir ನಿರ್ಮಾಣ ಮಾಡಲು ಉದ್ದೇಶಿಸಿದ್ದು ಒಂದನ್ನು ಅತ್ತನೂರು ಗ್ರಾಮದ ಹತ್ತಿರ ಇರುವ ಸರ್ಕಾರಿ ಜಮೀನಿನಲ್ಲಿ ನಿರ್ಮಾಣ ಮಾಡಿ ಅಲ್ಲಿಂದ 8 ಗ್ರಾಮಗಳಿಗೆ ಶುದ್ಧ ಕುಡಿಯುವ ನೀರು ಸರಬರಾಜು ಮಾಡುವುದು ಹಾಗೂ ಇನ್ನೊಂದನ್ನು ಕಲ್ಲೂರು ಗ್ರಾಮದಲ್ಲಿ ನಿರ್ಮಾಣ ಮಾಡಿ 2 ಗ್ರಾಮಗಳಿಗೆ ನೀರು ಸರಬರಾಜು ಮಾಡಲು ಉದ್ದೇಶಿಸಲಾಗಿತ್ತು.

ಸದರಿ ಕಾಮಗಾರಿಗೆ ಅತ್ತನೂರು ಗ್ರಾಮದ ಹತ್ತಿರ Impounding Reservoir ನಿರ್ಮಿಸಲು ಯೋಜಿಸಿದ ಸರ್ಕಾರಿ ಜಮೀನಿನ ಮಣ್ಣು ತಾಂತ್ರಿಕವಾಗಿ ಸೂಕ್ತ ರೀತಿಯಲ್ಲಿ ಇಲ್ಲದಿರುವುದರಿಂದ ಸ್ಥಳ ಬದಲಾಯಿಸಿ ತುಂಗಭದ್ರ ಕಾಲುವೆಯ ಗಣೇಕಲ್ ಬ್ಯಾರೇಜ್ ಕೆಳ ಭಾಗದಲ್ಲಿ ಇದ್ದ ಒಟ್ಟು 17 ಎಕರೆ 17 ಗುಂಟೆ ವಿಸ್ತೀರ್ಣದ ಖಾಸಗಿ ಜಮೀನಿನಲ್ಲಿ Impounding Reservoir ನಿರ್ಮಾಣ ಮಾಡಲು ಯೋಜಿಸಿ ಸದರಿ ಜಮೀನನ್ನು ಸರ್ಕಾರದ ಹೆಸರಿನಲ್ಲಿ ದಿನಾಂಕ:09.02.2018ರಂದು ನೊಂದಣಿ ಮಾಡಿಕೊಳ್ಳಲಾಗಿರುತ್ತದೆ.

ಕಾಮಗಾರಿಗೆ ಅವಶ್ಯವಿರುವ ಜಮೀನನ್ನು ಹಸ್ತಾಂತರ ಮಾಡಿಕೊಳ್ಳುವಲ್ಲಿ ವಿಳಂಬವಾಗಿರುವುದರಿಂದ ಗುತ್ತಿಗೆದಾರರು ಯಾವುದೇ ಪ್ರಕ್ರಿಯೆ ತೋರಿಸಿಲ್ಲವಾದ್ದರಿಂದ ಸದರಿ ಯೋಜನೆಯ ಗುತ್ತಿಗೆದಾರರಿಗೆ ಹಲವಾರು ಬಾರಿ ಕಾಮಗಾರಿಯನ್ನು ಪ್ರಾರಂಭಿಸಲು ಸೂಚಿಸಿದರೂ ಕಾಮಗಾರಿಯನ್ನು ಪುನಃ ಪ್ರಾರಂಭಿಸಿರುವುದಿಲ್ಲ ಹಾಗೂ

ಅಂತಿಮ ನೋಟಿಸ್ ನೀಡಿದರೂ ಸಹ ಕಾಮಗಾರಿ ಪ್ರಾರಂಭಿಸದೇ ಇರುವುದರಿಂದ ಅಂತಿಮ ಅಳತೆಗಳನ್ನು ತೆಗೆದುಕೊಂಡು ಪಂಚನಾಮ ಮಾಡಿ Risk and Cost ಆಧಾರದ ಮೇಲೆ ಕರಾರು ಒಪ್ಪಂದವನ್ನು ದಿನಾಂಕ:26.02.2020ರಂದು ಟೆಂಡರ್ ನಿಯಮಾನುಸಾರ ರದ್ದುಗೊಳಿಸಿ ಹಾಗೂ ಗುತ್ತಿಗೆದಾರರ ಪರವಾನಗಿಯನ್ನು ಕಪ್ಪು ಪಟ್ಟಿಗೆ ಸೇರಿಸಲು ಶಿಫಾರಸ್ಸು ಮಾಡಿ ಭದ್ರತಾ ಠೇವಣಿ ಮೊತ್ತ ರೂ.11,86500 ಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿರುತ್ತದೆ.

ಮುಂದುವರೆದು, ಅತ್ತನೂರು ಹಾಗೂ ಇತರೆ 7 ಗ್ರಾಮಗಳನ್ನು ಒಳಗೊಂಡಂತೆ ರಾಯಚೂರು ಜಿಲ್ಲೆಯ ಎಲ್ಲಾ ಗ್ರಾಮೀಣ ಜನವಸತಿಗಳಿಗೆ MVS DBOT ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಕಾಮಗಾರಿಯನ್ನು ತೆಗೆದುಕೊಳ್ಳಲಾಗಿರುತ್ತದೆ ಹಾಗೂ ಸದರಿ ಯೋಜನೆಯು ಶೇ.75ರಷ್ಟು ಪೂರ್ಣಗೊಂಡಿದ್ದು, ಪ್ರಗತಿಯಲ್ಲಿರುವ ಕಾಮಗಾರಿಯನ್ನು ಪೂರ್ಣಗೊಳಿಸಿ ಕುಡಿಯುವ ನೀರು ಸರಬರಾಜು ಮಾಡಲು ಯೋಜಿಸಿದೆ. ಸದರಿ ಕೆರೆಯ ಕಾಮಗಾರಿಯು ಅರ್ಧಕ್ಕೆ ನಿಂತು ಹೋಗಿರುವ ಕಾರಣದಿಂದ ಪ್ರಸ್ತುತ ಅನುಷ್ಠಾನ ಹಂತದಲ್ಲಿರುವ DBOT ಯೋಜನೆಯಲ್ಲಿ ಪರಿಗಣಿಸಿರುವುದಿಲ್ಲ ಹಾಗೂ ಸದರಿ ಕೆರೆಯನ್ನು ಪೂರ್ಣಗೊಳಿಸುವ ಕಾಮಗಾರಿಯನ್ನು ಕೈಗೊಳ್ಳಲು ಅವಕಾಶವಿರುವುದಿಲ್ಲ.

ಅನುಷ್ಠಾನ ಹಂತದಲ್ಲಿರುವ DBOT ಯೋಜನೆಯನ್ನು ಜೂನ್ 2027ರ ಅಂತ್ಯದೊಳಗೆ ಪೂರ್ಣಗೊಳಿಸಿ ಯೋಜಿತ ಎಲ್ಲಾ ಜನವಸತಿಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ಯೋಜಿಸಲಾಗಿರುತ್ತದೆ.

(ಶ್ರೀ ಈಶ್ವರ್ ಖಂಡ್ರೆ)

ಗ್ರಾಮೀಣಾಭಿವೃದ್ಧಿ ಮತ್ತು

ಪಂಚಾಯತ್ ರಾಜ್ ಸಚಿವರು.